**ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿಸಿ ನಂ. 612/2019**

| | | | |
|---|---|---|---|
| **ಹೆಸರು** | : | **ಜಗಪ್ಪ** | ಚಾ.ಸಾ. 2 |
| **ತಂದೆಯ ಹೆಸರು** | : | **ರಾಯಪ್ಪ** | ಪ್ರಾ.ಸಾ. 2 |
| **ವಯಸ್ಸು** | : | **26 ವರ್ಷ** | **ದಿನಾಂಕಃ 01-10-2024** |
| **ಉದ್ಯೋಗ** | : | **ಕೂಲಿ** | |
| **ವಾಸಸ್ಥಳ** | : | **ಚತ್ರಸಾಲ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ಚಾಸಾ-1 ನನಗೆ ಗೊತ್ತು. ಚಾಸಾ 3 ಮತ್ತು 5 ರವರು ನನಗೆ ಗೊತ್ತಿಲ್ಲ. 1 ನೇ ಆರೋಪಿ ನಮ್ಮ ಊರಿನವನ.

ಈಗ ನೋಡುತ್ತಿರುವ ನಿಪಿ-1 ಮತ್ತು 2 ರ ದಾಖಲೆಗಳಲ್ಲಿರುವ ಸಹಿ ನನ್ನದೆ. ನನ್ನ ಸಹಿಗಳನ್ನು ನಿಪಿ-1(ಬಿ) ಮತ್ತು ನಿಪಿ-2(ಬಿ) ಎಂದು ಗುರುತಿಸಲಾಯಿತು.

ಈಗ್ಗೆ 6 ವರ್ಷಗಳ ಹಿಂದೆ ಮದ್ಯಾಹ್ನ ಸಮಯಕ್ಕೆ ಚತ್ರಸಾಲದಿಂದ ಚಿಂಚೋಳಿಗೆ ಹೋಗುತ್ತಿರುವಾ ಬುರುಗಪಳ್ಳಿ ಹತ್ತಿರ ಪೋಲಿಸರು ನನಗೆ ನಿಲ್ಲಿಸಿ ಸಹಿ ಮಾಡು ಎಂದು ಹೇಳಿದ್ದಕ್ಕೆ ಸಹಿ ಮಾಡಿದ್ದೇನೆ. ಯಾವ ಕಾರಣಕ್ಕಾಗಿ ಸಹಿ ಪಡೆದುಕೊಂಡರು ಎಂದರೆ ನನಗೆ ಗೊತ್ತಿಲ್ಲ. ಆ ಕಾಲಕ್ಕೆ ನ್ಯಾಯಾಲಯದ ಮುಂದೆ ಇರುವ ವೆಂಕಟಪ್ಪ ದ್ವಿಚಕ್ರ ವಾಹನದಲಿ ಹೊರಟಿದ್ದ. ಪೋಲಿಸರು ನನ್ನ ಸಮಕ್ಷಮ ಯಾವುದೇ ವಸ್ತು ಜಪ್ತು ಮಾಡಿಲ್ಲ ಮತ್ತು ಯಾವುದೇ ಸ್ಥಳಕ್ಕೆ ಕರೆದುಕೊಂಡು ಹೋಗಿಲ್ಲ.

(ಈ ಹಂತದಲ್ಲಿ ತನಿಖಾಧಿಕಾರಿಯವರ ಮುಂದೆ ಸಲ್ಲಿಸಿರುವ ಪಂಚನಾಮೆಗೆ ಈ ಸಾಕ್ಷಿ ಸಂಪೂರ್ಣ ಪ್ರತಿಕೂಲ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೊಡುವಂತೆ ಸ.ಸ.ಅ.ರವರು ಅನುಮತಿ ಕೋರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದ-**

ದಿನಾಂಕಃ 11-05-2019 ರಂದು ಬೆಳಿಗ್ಗೆ 08-00 ಗಂಟೆ ಸುಮಾರಿಗೆ ಅಬಕಾರಿ ಅಧಿಕಾರಿಗಳು ನನಗೆ ಕರೆದು ಭಾತ್ಮಿ ಬಗ್ಗೆ ತಿಳಿಸಿದರು ಎಂದರೆ ಸರಿಯಲ್ಲ. ನಂತರ ನಾನು, ಚಾಸಾ-1 ರವರು

ಪೋಲಿಸರ ಜೊತೆ ಬೆಳಿಗ್ಗೆ 9-30 ಗಂಟೆ ಸುಮಾರಿಗೆ ಚತ್ರಸಾಲ ಗ್ರಾಮದಿಂದ ಗಂಗನಪಳ್ಳಿ ಗ್ರಾಮದ ರಸ್ತೆಯ ಮೇಲೆ 1ನೇ ಆರೋಪಿ ತನ್ನ ವಾಹನದಲ್ಲಿ ಅಕ್ರಮವಾಗಿ ಮದ್ಯಪಾನ ಸಾಗಾಣಿಕೆ ಮಾಡುವುದು ಕಂಡುಬಂದಿರುತ್ತದೆ ಎಂದರೆ ಸರಿಯಲ್ಲ. ಆಗ 1ನೇ ಆರೋಪಿ ಹತ್ತಿರ ಮದ್ಯಾಪಾನ ಬಾಟಲಿಗಳನ್ನು ಮತ್ತು ದ್ವಿಚಕ್ರ ವಾಹನವನ್ನು ಜಪ್ತಿ ಮಾಡಿ ಜಪ್ತಿ ಪಂಚನಾಮೆ ಬರೆದಿರುತ್ತಾರೆ ಎಂದರೆ ಸರಿಯಲ್ಲ. ಎಲ್ಲಾ ಗೊತ್ತಿದ್ದರೂ ಆರೋಪಿತರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ರಾಸಾಯನಿಕ ಪರೀಕ್ಷೆಗಾಗಿ ಸದರಿ ವಸ್ತುಗಳನ್ನು ಜಪ್ತಿ ಮಾಡಿ ಸೀಲ ಮಾಡಿರುತ್ತಾರೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ನೇ ಆರೋಪಿತರ ಪರವಾಗಿ ಶ್ರೀ NCH ವಕೀಲರಿಂದಃ- ಇಲ್ಲಾ.**

**ಪಾಟೀ ಸವಾಲುಃ 1 ನೇ ಆರೋಪಿತರ ಪರವಾಗಿ ಶ್ರೀ SSA ವಕೀಲರಿಂದಃ- ಇಲ್ಲಾ.**

**ಮರುವಿಚಾರಣೆಃ ಇಲ್ಲಾ.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**
**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ**